ಅ) ನೂತನ ಬಸ್ ಡಿಪೋಗಳನ್ನು ಪ್ರಾರಂಭಿಸುವ ಉದ್ದೇಶವಿದೆಯೇ?

ಇ) ಹಾಗಿದ್ದಲ್ಲಿ ಇದರ ವಿವರಗಳೇನು?

ಶ್ರೀ ರಮಾನಾಥ ರೈ (ಸಾರಿಗೆ ಸಚಿವರು) :

ಅ) ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 2 ಡಿಪೋಗಳು ಕಾರ್ಯನಿರ್ವಹಿಸುತ್ತಿವೆ. ಅವು ಮಂಡ್ಯ ಮತ್ತು ಮದ್ದೂರು.

ಆ) ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಡಿಪೋ ಸ್ಥಾಪಿಸುವ ಪ್ರಸ್ತಾವನೆ ಇರುತ್ತದೆ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮಳವಳ್ಳಿಯಲ್ಲಿ 5.36 ಎಕರೆ ಜಮೀನನ್ನು ದಿನಾಂಕ : 28.3.2002 ರಂದು ಸ್ವಾಧೀನಕ್ಕೆ ಪಡೆದಿರುತ್ತದೆ. ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಡಿಪೋ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು.

ಮಂಡ್ಯ ನಗರದಲ್ಲಿನ ಮದ್ಯ ಮಾರಾಟ ಅಂಗಡಿಗಳು

1552 (1965) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ವಿವಿಧ ವರ್ಗಗಳ ಅಡಿ ಮಂಜೂರಾಗಿ ಮದ್ಯ ಮಾರಾಟ ಮಾಡುತ್ತಾ ಇರುವ ಮದ್ಯದ ಅಂಗಡಿಗಳೆಷ್ಟು?

ನಗರದ ಜನಸಂಖ್ಯೆಗೆ ಅನುಗುಣವಾಗಿದೆಯೇ?

ಆ) ಈ ರೀತಿ ಮಂಜೂರಾತಿ ಮಾಡುವಾಗಿನ ನಿಬಂಧಗಳೇನು ಹಾಗೂ ಸಾರ್ವಜನಿಕರಿಂದ ನಿರಾಕ್ಷೇಪಣೆಯನ್ನು ಪಡೆಯಲಾಗಿದೆಯೇ?

ಇ) ಮದ್ಯ ಮಾರಾಟವನ್ನು ಸಗಟು ಅಥವಾ ಚಿಲ್ಲರೆಯಾಗಿ ಮಾರಾಟ ಮಾಡಲು ಅನುಸರಿಸಬೇಕಾದ ನಿಯಮಾವಳಿಗಳೇನು?

ಈ) ರಿಟೈಲ್ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುತ್ತಾ ಇರುವ ಕಾರ್ಯವೈಖರಿ ಸಾರ್ವಜನಿಕರಿಗೆ ನ್ಯೂಸೆನ್ಸ್ (Public Nuisance) ಆಗಿರುವುದನ್ನು ಗಮನಿಸಲಾಗಿದೆಯೇ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಸಿ ಎಲ್.1 - 4

ಸಿ ಎಲ್ 2 - 23

ಸಿ ಎಲ್ 4 - 2

ಸಿ ಎಲ್ 9 - 22

ಹೌದು

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಹೌದು

ಇ) ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶಿಯ ಮದ್ಯ ಮಾರಾಟ) ನಿಯಮಗಳು 1968ನ್ನು ಅನುಸರಿಸಲಾಗುತ್ತದೆ.

ಈ) ಚಿಲ್ಲರೆ ಮದ್ಯ ಮಾರಾಟದ ಅಂಗಡಿಗಳಲ್ಲಿ ಮದ್ಯವನ್ನು ಬಿಡಿಯಾಗಿ ಮಾರಾಟ ಮಾಡುವ ಬಗ್ಗೆ ದೂರುಗಳು ಬಂದಾಗಲೆಲ್ಲ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ

ಸನ್ನದ್ದು ಮಂಜೂರಾತಿಗಾಗಿ ಅನುಸರಿಸಬೇಕಾದ ನಿಯಮಗಳು

1. ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶೀಯ ಮದ್ಯ ಮಾರಾಟ) ನಿಯಮಗಳು 1968 ರ ಅಡಿಯಲ್ಲಿ ಸನ್ನದು ಪಡೆಯಲಿಚ್ಚಿಸುವವರು ಈ ನಿಯಮಗಳ ನಿಯಮ 4 ರಲ್ಲಿ ಸೂಚಿಸಿರುವ ನಮೂನೆ ಸಿ ಎಲ್-ಎ 1 ರಲ್ಲಿ ಅರ್ಜಿಯನ್ನು ಹಾಗೂ ನಿಯಮ 9ರ ಅನ್ವಯ ಮದ್ಯದ ಬ್ರಾಂಡ್ ಲಿಸ್ಟ್‌ನ್ನು ಸಂಬಂಧಪಟ್ಟ ದಾಖಿಲಾತಿಗಳೊಂದಿಗೆ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
2. ಹಾಗೂ ಅವರ ಯಾವ ವಿಧವಾದ ಸನ್ನದನ್ನು ಪಡೆಯಲಿಚ್ಚಿಸುವರೊ ಆ ಸನ್ನದಿಗೆ ಪ್ರದೇಶ ವ್ಯಾಪ್ತಿಗೆ ಅನುಗುಣವಾಗಿ ನಿಗಧಿಪಡಿಸಿರುವ ಸನ್ನದು ಶುಲ್ಕ ಹಾಗೂ ಹೆಚ್ಚುವರ ಸನ್ನದು ಶುಲ್ಕವನ್ನು ಸಂದಾಯ ಮಾಡತಕ್ಕದ್ದು.
3. ಸನ್ನದು ನಡೆಸಲು ನಿಯೋಜಿಸಿರುವ ಸ್ಥಳವು ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳ) 1967 ರ ನಿಯಮ 5ರ ರೀತ್ಯಾ ಅನಾಕ್ಷೇಪಣಾ ಸ್ಥಳದಲ್ಲಿ ಇರಬೇಕು.

   ನಿಯೋಜಿತ ಸ್ಥಳಕ್ಕೆ ಸನ್ನದು ಮಂಜೂರು : ನವೀಕರಿಸುವ ಮುನ್ನ ಸಂಬಂಧ ಪಟ್ಟ ವಲಯಾಧಿಕಾರಿಗಳು ನಿಯೋಜಿತ ಸ್ಥಳವು ಅನಾಕ್ಷೇಪಣಾ ಸ್ಥಳದಲ್ಲಿ ಇದೆಯೇ ಎಂಬ ಬಗ್ಗೆ ಮಹಜರ್ ನಡೆಸಿ ಸಾರ್ವಜನಿಕರಿಂದ ನಿರಾಕ್ಷೇಪಣೆ -ಯನ್ನು ಪಡೆದು ಸದರಿ ಸ್ಥಳಕ್ಕೆ ಸನ್ನದು ನೀಡಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುತ್ತಾರೆ.
4. ಜಿಲ್ಲಾಧಿಕಾರಿಗಳು ಬಂದಿರುವ ದಾಖಿಲಾತಿಗಳನ್ನು ಪರಿಶೀಲಿಸಿ, ಅವಶ್ಯವಿದ್ದಲ್ಲಿ ಅಬಕಾರಿ ಉಪ ಆಯುಕ್ತರಿಂದ ಸ್ಥಳ ತನಿಖೆ ನಡೆಸಿ ಅಬಕಾರಿ ಆಯುಕ್ತರ ಪೂರ್ವಾನುಮತಿ ಪಡೆದು ಸನ್ನದು ನೀಡುತ್ತಾರೆ.

ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಪಡೆದ ಕಟ್ಟಡ ಲೈಸನ್ಸ್ ನಿಯಮಾವಳಿಗಳ ಉಲ್ಲಂಘನೆ

1553 (1966) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆದ ಬಿಲ್ಡಿಂಗ್ ಲೈಸೆನ್ಸ್ ಹಾಗೂ ಕಟ್ಟಡ ಕಟ್ಟುವಲ್ಲಿನ ನಿಯಮಾವಳಿಗಳು ಉಲ್ಲಂಘನೆಯಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಗರಾಭಿವೃದ್ಧಿ ಪ್ರಾಧಿಕಾರಿಗಳು ಲೈಸೆನ್ಸ್ ಹಾಗೂ ಕಟ್ಟಡದ ನಿಯಮಾವಳಿಗಳ ಉಲ್ಲಂಘನೆಯನ್ನು ತಡೆಯಲು ಪ್ರಾಧಿಕಾರಿಗಳು ವಿಫಲವಾಗುತ್ತಾ ಇರುವುದನ್ನು ಸರ್ಕಾರ ಮನಗಂಡಿದೆಯೇ?